ನನ್ನ ಹಳ್ಳಿಗಾಡಿನ ಬದುಕಿನ ಚಿತ್ರಣಗಳಾಗಿದ್ದವು. (ಮುಂದೆ ಅನೇಕ ವರ್ಷಗಳ ನಂತರ 1985 ರಲ್ಲಿ 'ಪ್ರಜಾವಾಣಿ'ಯಲ್ಲಿ ನನ್ನ 'ಹಾರುತಿಹುದು, ಏರುತಿಹುದು ನೋಡು ನಮ್ಮ ಬಾವುಟ' ಎಂಬ ಕತೆ ಪ್ರಕಟವಾದಾಗ ಮಂಡ್ಯದ ಗೌರ್ನಮೆಂಟ್ ಆಸ್ಪತ್ರೆಯಲ್ಲಿ ಡಾಕ್ಟರ್ ಆಗಿದ್ದ ಬೆಸಗರಹಳ್ಳಿ ರಾಮಣ್ಣ ಒಂದು ಕಾರ್ಡು ಬರೆದು 'ನಿನ್ನ ಕತೆಯ ರಾಮ ಈ ರಾಮನ ಎದೆಯಲ್ಲಿ ಗೂಟ ಹೊಡ್ಕಂಡ್ ಕುಂತವ್ನೆ ಕನಯ್ಯ. ನಿನ್ನ ಮುದ್ದು ಮುಖಾನ ಯಾವಾಗಾದ್ರೂ ಬಂದು ವಸಿ ತೋರ್ಸು ಮಾರಾಯ' ಎಂದು ಸಂಭ್ರಮಿಸಿದ್ದರು. ವಯಸ್ಸಿನ ಅಂತರವಿದ್ದರೂ ನಾವಿಬ್ಬರು ಅಂತರಂಗದ ಗೆಳೆಯರಾದದ್ದು ದೊಡ್ಡ ಕತೆ. 1995ರಲ್ಲಿ ಪ್ರಕಟವಾದ ನನ್ನ ಮೊದಲನೆಯ ಕಥಾ ಸಂಕಲನ 'ಹಂದ್ರಾಳ'ಕ್ಕೆ ಅವರೇ ಪ್ರೀತಿಯಿಂದ ಮುನ್ನುಡಿ ಬರೆದಿದ್ದರು). ಆ ವರ್ಷ ಕಾಲೇಜು ಮ್ಯಾಗ್ಜೀನ್‌ಗೆ ಕತೆ, ಕವನ ಎರಡನ್ನೂ ಬರೆದೆ. ಅಷ್ಟೆ, ಮುಂದೆ ಎಂ.ಎಂ. ಪಾಸಾಗುವವರೆಗೂ ಕಾಲೇಜು ಮ್ಯಾಗ್ಜೀನ್‌ಗಳಲ್ಲಿ ಅರ್ಧಕ್ಕರ್ಧ ನನ್ನದೇ ಬರಹಗಳಿರುತ್ತಿದ್ದವು. ಆದರೆ ಲೇಖಕರ ಹೆಸರುಗಳು ಮಾತ್ರ ಬೇರೆ ಬೇರೆಯಾಗಿರುತ್ತಿದ್ದವು! ಈ ಮಧ್ಯೆ ತಮಿಳು ಮತ್ತು ಹಿಂದಿ ವಿರುದ್ಧದ ಚಳವಳಿಗಳಲ್ಲಿ ತುರ್ತುಪರಿಸ್ಥಿತಿ ವಿರುದ್ಧ ಚಳವಳಿಗಳಲ್ಲಿ ಉತ್ಸಾಹದಿಂದ ಭಾಗವಹಿಸಿ ಕೆಲವೊಮ್ಮೆ ಪೊಲೀಸ್ ಸ್ಟೇಷನ್ ಮೆಟ್ಟಿಲು ತುಳಿದಿದ್ದೂ ಇದೆ. ಗೋಕಾಕ್ ಚಳವಳಿಯಲ್ಲಿ ಭಾಗವಹಿಸಿ ಮೈಸೂರ್ ಬ್ಯಾಂಕ್ ಹತ್ತಿರ ಪೊಲೀಸರಿಂದ ತಿಂದ ಲಾಟಿ ಏಟಿನ ಗುರುತು ಈಗಲೂ ನನ್ನ ಬಲಗೈ ಮೇಲೆ ಹಚ್ಚೆಯಂತೆ ಉಳಿದಿದೆ. ಹೀಗಾಗಿ ನನ್ನ ಹಳ್ಳಿಗಾಡಿನ ವಿಸ್ತಾರವಾದ ಬಾಲ್ಯದ ಅನುಭವಗಳು, ಅಷ್ಟೇ ವಿಶಾಲವಾದ ನಗರದ ಅನುಭವಗಳು ನನ್ನ ಕಥಾನಕದಲ್ಲಿ ರೂಪುಗೊಂಡು ಕಥಾ ಹಂದರಗಳಿಗೆ ಬರವೇ ಇಲ್ಲದಂತಾಯಿತು. ಹಳ್ಳಿಗಾಡಿನ ಒರಟು ಭಾಷೆ ಮತ್ತು ನಗರದ ನಯನಾಜೂಕಿನ ಭಾಷೆ ಎರಡೂ ಸುಲಲಿತವಾಗಿ ಒಲಿದು ಇದುವರೆಗೆ ಐನೂರರಷ್ಟು ಕತೆಗಳನ್ನು ಬರೆಯಲು ಸಾಧ್ಯವಾಯಿತೇನೋ. ಗ್ರಾಮೀಣ ಜಗತ್ತಿನ ರೈತಾಪಿ ಮತ್ತು ದಲಿತ ಬದುಕಿನ ಸಕಲ ಸಂಕಷ್ಟಗಳೂ ನನ್ನ ಕತೆಗಳಲ್ಲಿ ಅನಾವರಣಗೊಂಡಿವೆ. ಕಾಫಿ, ಸೀಕು, ಅನ್ನಕ್ಕಾಗಿ ಅಂದಿನ ದಿನಗಳಲ್ಲಿ ಹಳ್ಳಿಯ ಕುಟುಂಬಗಳಲ್ಲಿ ನಡೆಯುತ್ತಿದ್ದ ಜಗಳಗಳು ಕೂಡ ನನ್ನ ಕತೆಗಳಲ್ಲಿ ಮಹತ್ವವನ್ನು ಪಡೆದುಕೊಂಡಿವೆ. ಅಂತೆಯೇ ಪಟ್ಟಣದಲ್ಲಿ ಬದುಕಿಗಾಗಿ ಒದ್ದಾಡುವ ಸಾಮಾನ್ಯ ಜನ, ಹಮಾಲಿಗಳು, ಬದುಕಿಗಾಗಿ ಸೂಳೆಗಾರಿಕೆಯಲ್ಲಿ ತೊಡಗಿದ ಹೆಂಗಸರು, ಭಿಕ್ಷುಕರು, ಕುಡುಕರು, ಫುಟ್‌ಪಾತ್ ಚಿಲ್ಲರೆ ವ್ಯಾಪಾರಿಗಳು, ತಲೆ ಹಿಡುಕರು, ಹಿಜಿಡಾಗಳು ಮುಂತಾಗಿ ಸಮಾಜದ ಎಲ್ಲಾ ಕಟ್ಟ ಕಡೆಯ ವ್ಯಕ್ತಿಗಳು ನನ್ನ ಕತೆಗಳಲ್ಲಿ ನಾಯಕ, ನಾಯಕಿಯರಂತೆ ವಿಜೃಂಭಿಸಿರುವುದು ಕಥಾನಕದ ಹೆಮ್ಮೆ ನನಗೆ. ನನ್ನ ಸಂಕಲನವೊಂದಕ್ಕೆ ಮುನ್ನುಡಿ ಬರೆಯುತ್ತಾ ಅಗ್ರಹಾರ ಕೃಷ್ಣಮೂರ್ತಿಯವರು 'ದಾರಿದ್ರ್ಯದ ದಶಾವತಾರಗಳನ್ನು ತೆರೆದಿಡುವ ಕತೆಗಾರ ನಮ್ಮ ಹಂದ್ರಾಳ' ಎಂದಿರುವುದು. ಮತ್ತು ನನ್ನದೊಂದು ಪುಸ್ತಕ ವಿಮರ್ಶೆಯನ್ನು ಲಂಕೇಶ್ ಪತ್ರಿಕೆಯಲ್ಲಿ ಮಾಡುತ್ತಾ ಆಲ್ಮನೆ ರಘುಪತಿಯವರು 'ಕೇಶವರೆಡ್ಡಿ ಹಂದ್ರಾಳರ ಕತೆಗಳು ಭಾರತದ ಕೆಟ್ಟು ಕೆರ ಹಿಡಿದ ಜನರ ಕತೆಗಳಾಗಿವೆ' ಎಂದಿರುವುದು ನಾನು 'ಇಲ್ಲದವರ ಪರ' ಕತೆಗಾರನೆಂಬ ಹೆಮ್ಮೆ ಹುಟ್ಟಿಸಿದೆ ನನಗೆ. ಗಾಂಧಿ ಮತ್ತು ಕಾರ್ಲ್ ಮಾರ್ಕ್ಸ್ ಇಬ್ಬರೂ ನನಗೆ ಅತ್ಯಂತ ಪ್ರಿಯರಾಗಿರುವುದಕ್ಕೆ ಕಾರಣವೇನೆಂಬ ಪ್ರಶ್ನೆಗೆ ಇನ್ನೂ ಉತ್ತರವನ್ನು ಹುಡುಕುತ್ತಲೇ ಇದ್ದೇನೆ.

ನಾನೂ ಕೂಡ ಒಬ್ಬ ಕತೆಗಾರನೆಂದು ನನಗೆ ಅನ್ನಿಸಲು ಶುರುವಾದದ್ದು 'ಮಯೂರ'ದಲ್ಲಿ 1984ರಲ್ಲಿ ನನ್ನ 'ಶೋಧನೆ' ಎಂಬ ಕತೆ ಮತ್ತು 'ಪ್ರಜಾವಾಣಿ'ಯಲ್ಲಿ 'ಹಾರುತಿಹುದು ಏರುತಿಹುದು ನೋಡು ನಮ್ಮ ಬಾವುಟ' ಕತೆ ಪ್ರಕಟಗೊಂಡ ನಂತರವೇ. 1985ರಿಂದ ನನ್ನ